## 4. ಅಮೆರಿಕ ಅಧ್ಯಕ್ಷರಿಗಾಗಿ ಹೊಸ ಏರ್‌ಫೋರ್ಸ್ ಒನ್

ಜಗತ್ತಿನ ಅತ್ಯಾಧುನಿಕ ಹಾಗೂ ಗರಿಷ್ಠತಿಗರಿಷ್ಠ ಭದ್ರತೆಯ ವಿವಿಐಪಿ ವಿಮಾನವೆಂದರೆ ಅದು ಅಮೆರಿಕದ 'ಏರ್‌ಫೋರ್ಸ್ ಒನ್, ಸವಲತ್ತುಗಳಲ್ಲಿ, ಸುರಕ್ಷತೆಯಲ್ಲಿ ಈ ವಿಮಾನಕ್ಕೆ ಸರಿಸಾಟಿಯಾದ ಬೇರೊಂದು ವಿಮಾನವಿಲ್ಲ. ಈಗ ಚಾಲ್ತಿಯಲ್ಲಿರುವ ವಿಮಾನ ಹಳತಾಗಿದ್ದರಿಂದ ಅದನ್ನು ನೇಪಥ್ಯಕ್ಕೆ ಸರಿಸಲಾಗುತ್ತಿದ್ದು, ಸದ್ಯದಲ್ಲೇ ಹೊಸ 'ಏರ್‌ಫೋರ್ಸ್ ಒನ್' ಅಸ್ತಿತ್ವಕ್ಕೆ ಬರಲಿದೆ.

'ವಿಸಿ–25ಬಿ' ಎಂಬ ವಿಮಾನವನ್ನು ಹೊಸದಾಗಿ 'ಏರ್‌ಫೋರ್ಸ್ ಒನ್' ವಿಮಾನವಾಗಿ ಪರಿವರ್ತಿಸಲಾಗುತ್ತಿದೆ. ಇದು ಜೆಟ್ ತಂತ್ರಜ್ಞಾನವುಳ್ಳ ವಿಮಾನ. ಅತ್ಯಂತ ವೇಗವಾಗಿ ನಿಖರವಾಗಿ ಪ್ರಯಾಣಿಸುವ, ಕ್ಷಿಪಣಿಯನ್ನು ಹಿಮ್ಮೆಟ್ಟಿಸುವ, ಮಿಂಚು–ಗುಡುಗು ಇವುಗಳನ್ನು ನಿಗ್ರಹಿಸುವ ಛಾತಿಯನ್ನು ಹೊಂದಿದೆ. ಸುಮಾರು ರೂ. 5,900 ಸಾವಿರ ಕೋಟಿ ನೀಡಿ ವಿಮಾನವನ್ನು ಖರೀದಿಸಲಾಗಿದೆ. ಈಗ ನಿವೃತ್ತಿಯ ಅಂಚಿನಲ್ಲಿರುವ ಏರ್‌ಫೋರ್ಸ್ ಒನ್ ವಿಮಾನಕ್ಕೆ ಹೋಲಿಸಿದರೆ ಈ ವಿಮಾನದಲ್ಲಿ ಕೆಲವು ಸೌಲಭ್ಯಗಳು ಕಡಿಮೆ. ಅಂದರೆ, ಅನಗತ್ಯ ಸೌಲಭ್ಯಗಳನ್ನು ತೆಗೆದು ಹಾಕಲಾಗಿದೆ. ಆದರೆ, ಮೊದಲಿಗಿಂತಲೂ ದೊಡ್ಡದಾದ ವಿಮಾನವಿದು. ಸುರಕ್ಷತೆಗೆ ಹೆಚ್ಚು ಒತ್ತು ನೀಡಲಾಗಿದೆ.

ಆಧಾರ:ಉದಯವಾಣಿ, ದಿನಾಂಕ:28.07.2020